ದಿನಾಂಕಃ **08.01.2024.**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎಂ ವಕೀಲರಿಂದಃ-

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಅಳಿಯ ಮತ್ತು ಮಗಳ ಜೊತೆ ಬಂದೆ ಎನ್ನುವುದು ಸರಿಯಲ್ಲ. ಜುಬಾನಿ ಹಿಸ್ಸೆ ಆದ ನಂತರ ದಿಃ 10.01.2006 ರಿಂದ ನಾನು ಮತ್ತು ನನ್ನ ಗಂಡ ಹಾಗೂ ಮಕ್ಕಳು ಪ್ರತ್ಯೇಕವಾಗಿ ವಾಸವಾಗಿದ್ದೆವು. ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ಗಂಡ ಮಾತ್ರ ಒಟ್ಟಿಗೆ ಇದ್ದೇವೆ ಎನ್ನುತ್ತಾರೆ. ನಮ್ಮ ಮಕ್ಕಳ ವ್ಯವಹಾರಗಳನ್ನು ಅವರೇ ಮಾಡುತ್ತಾರೆ, ನಮ್ಮ ವ್ಯವಹಾರವನ್ನು ನಾವೇ ಮಾಡುತ್ತೇವೆ. ದಿಃ 10.01.2006 ರಲ್ಲಿ ಆದ ಜುಬಾನಿ ಹಿಸ್ಸೆಯಲ್ಲಿ ನನಗೆ ಮತ್ತು ನನ್ನ ಗಂಡನಿಗೆ 1 ಎಕರೆ 31 ಗುಂಟೆ ಬಂತು. ಅದೇ ರೀತಿ ನಾವಿದ್ದ ಮನೆ ಆಸ್ತಿ ಸಂಖ್ಯೆ 106/1 ರಂತೆ ಮನೆ ಬಂತು. ಅದು ಪಿತ್ರಾರ್ಜಿತ ಆಸ್ತಿ ಎನ್ನುವುದು ಸರಿಯಲ್ಲ. ಅದು ಪಿತ್ರಾರ್ಜಿತವಾಗಿ ಬಂದ ಮನೆ ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ಅದರಲ್ಲಿ ನಾನು ಮತ್ತು ನನ್ನ ಮನೆಯವರು ವಾಸವಾಗಿದ್ದೇವೆ. ನಮಗೆ ಬಂದ ಆಸ್ತಿಯಲ್ಲಿ 12 ಗುಂಟೆಯನ್ನು ನಾವು 26 ಲಕ್ಷ ರೂಗಳಿಗೆ ಮಾರಾಟ ಮಾಡಿದೆವು. ಸಾಕ್ಷಿ ಮುಂದುವರೆದು ನಾಗರಾಜಪ್ಪ ಮತ್ತು ರಮೇಶಪ್ಪ ಇಬ್ಬರು ತೀರಿಕೊಂಡಿದ್ದಾರೆ. 3 ನೇ ಮಗ ರಮೇಶಪ್ಪ 2019 ರಲ್ಲಿ ಫೌತಿಯಾಗಿದ್ದಾರೆ. ಈ ಕೇಸನ್ನು ದಾಖಲಿಸುವ ಮೊದಲೇ ಅವರು ಫೌತಿಯಾಗಿದ್ದಾರೆ.

ರಮೇಶನಿಗೆ ಇದ್ದ ಆಸ್ತಿಯಲ್ಲಿ ನನಗೆ ಹಕ್ಕಿದೆ. ಜುಬಾನಿ ಹಿಸ್ಸೆಯಂತೆ ಮೃತ ನಾಗರಾಜಪ್ಪನ ಹೆಸರಿಗೆ ದಾವಾ ಆಸ್ತಿಗಳು ಖಾತೆಯಾಯಿತು ಎಂದರೆ ಸರಿ. ಅವರಿಗೆ ಬಂದಂತಹ ಆಸ್ತಿಯಲ್ಲಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡು ತಾನು ಸ್ವಾಧೀನದಲ್ಲಿದ್ದ ಎಂದರೆ ಸರಿ. ನನ್ನ ಮಗ ನಾಗರಾಜಪ್ಪ ಫೌತಿಯಾದ ನಂತರ ಅವರ ಹೆಂಡತಿಯ ಹೆಸರಿಗೆ ಖಾತೆಯಾಯಿತು ಎಂದರೆ ಸರಿ. ಬಸಮ್ಮಳ ಹೆಸರಿಗೆ ಖಾತೆಯಾದ ನಂತರ ಅವರು ದಾವಾ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 2015 ರಲ್ಲಿ ಬಸಮ್ಮ ಫೌತಿಯಾದರು. ನಾಗರಾಜಪ್ಪ ದಿಃ 08.08.2011 ರಲ್ಲಿ ತೀರಿಕೊಂಡರು. ಬಸಮ್ಮ ಜೀವಂತ ಇರಬೇಕಾದರೆ ಪ್ರತಿವಾದಿಯನ್ನು ದತ್ತು ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅವರು ನನಗೆ ಹೇಳದೇ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ಬಸಮ್ಮ ತೀರಿದ ನಂತರ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿ ಖಾತೆಯಾಯಿತು ಎಂದರೆ ಸರಿ. ಪ್ರತಿವಾದಿ ಹೆಸರಿಗೆ ಖಾತೆಯಾದ ನಂತರ ಅವರೇ ದಾವಾ ಆಸ್ತಿಗಳನ್ನು ನೋಡುತ್ತಿದ್ದಾರೆ.

ದಾವಾ ಆಸ್ತಿಗಳ ಸರ್ವೆ ನಂಬರ್ ಗಳನ್ನು ನಾನು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಅವುಗಳ ವಿಸ್ತೀರ್ಣವನ್ನು ಹೇಳಬಲ್ಲೆ ಎನ್ನುತ್ತಾರೆ. ಪ್ರತಿವಾದಿಯನ್ನೇ ನಾನು ನೇರವಾಗಿ ನನ್ನ ಹಿಸ್ಸೆ ಕೊಡುವಂತೆ ಕೇಳಿರುತ್ತೇನೆ. ದಾವಾ ಆಸ್ತಿಗಳನ್ನು ಕಡಿಮೆ ಮೌಲ್ಯ ಮಾಪನ ಮಾಡಿ ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲದಿದ್ದರೂ ಸಹ ಈ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಹಕ್ಕಿಲ್ಲ ಎನ್ನುವುದು ಸರಿಯಲ್ಲ. ರಮೇಶಪ್ಪನಿಗೆ ಕೊಟ್ಟ ಆಸ್ತಿಗಳಲ್ಲಿ ನಾನು ಹಿಸ್ಸೆ ಕೇಳದೇ ಕೇವಲ ದಾವಾ

ಆಸ್ತಿಗಳಲ್ಲಿ ಹಿಸ್ಸೆ ಕೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಹೇಳಿದ ಹಾಗೆ ನಾನು ಕೇಳುತ್ತೇನೆ. ಅವರ ಕುಮ್ಮಕ್ಕಿನಿಂದ ಈ ಕೇಸು ಹಾಕಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಹಕ್ಕಿಲ್ಲ ಎನ್ನುವುದು ಸರಿಯಲ್ಲ. ದಾವಾ ಆಸ್ತಿಗಳು ಬೆಲೆ ಬಾಳುವ ಆಸ್ತಿಗಳಾಗಿರುವುದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಮತ್ತು ನನ್ನ ಮಕ್ಕಳ ಮಾತು ಕೇಳಿ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಾಗರಾಜಪ್ಪನ ಕಾನೂನು ಬದ್ಧ ವಾರಸುದಾರರಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಕಾನೂನು ಬದ್ಧ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.